"ಸೊನ್ನೆ... ದೊಡ್ಡ ಸೊನ್ನೆ. ಬರೇ ಸಣ್ಣ ಸಣ್ಣ ಆಪರೇಶನ್ ಮಾಡ್ತಾನಷ್ಟೇ. ದೊಡ್ಡ ಆಪರೇಷನ್ ಮಾಡಲು ಅವನಿಗೂ ನಿನ್ನಷ್ಟೇ ತರಬೇತಿಯಾಗಿದೆ. ಅವನಿಗೆ ಬೇಕಾದ ಎಲ್ಲ ಸವಲತ್ತುಗಳನ್ನು ಕೊಟ್ಟಿದ್ದೇನೆ. ಪೂರ್ತಿ ಸ್ವಾತಂತ್ರ್ಯವಿದೆ. ಆದ್ರೆ ಇದುವರೆಗೂ ಒಂದೇ ಒಂದು ದೊಡ್ಡ ಆಪರೇಶನ್ ಮಾಡಿಲ್ಲ. ಹಿ ಹ್ಯಾಸ್ ಗಾಟ್ ಬ್ರೇನ್ಸ್ ಬಟ್ ನಾಟ್ ಯುವರ್ ಬಾಲ್ಸ್'' ಎಂದ.

ತೋಳ ಬೇಟೆಯಾಡುವಾಗ ತನ್ನ ಮಿಕಕ್ಕೆ ಅರೆಗಳಿಗೆಯ ಪುರಸೊತ್ತೂ ಕೊಡುವುದಿಲ್ಲವಂತೆ. ಹೊಗಳಿದ್ದರ ಬಗೆಗಿನ ನನ್ನ ಮೌನವನ್ನು ಕಂಡು ಪಟ್ಟಿಗೆ ಸಿಕ್ಕ ಜಟ್ಟಿಯನ್ನು ಮತ್ತೂ ಕೆಡವುವಂತೆ ಸಹೋದ್ಯೋಗಿಗೆ ಹೋಲಿಸಿ ಹೊಗಳುತ್ತ ನೇರ ನಮ್ಮ ಬಾಲ್ಸ್‌ಗೇ ಕೈ ಹಾಕಿದ್ದ!

ಈ ಹೊಗಳಿಕೆಯ ಪ್ರಹಾರಕ್ಕೆ ಮಣಿದರೆ ಅವನ ಮುಂದಿನ ಚೌಕಾಸಿ ಶುರುವಾಗುವುದಿತ್ತು. ಈಗ ಅರೆಗಳಿಗೆ ಹೊತ್ತು ಸುಮ್ಮನಿರುವುದೇ ಜಾಣತನವೆನಿಸಿತು. ಅವನು ಯಾಕೆ ನನ್ನೊಡನೆ ಮಾತಿಗೆ ಬಂದಿದ್ದ ಎನ್ನುವುದನ್ನು ಹೇಳಲು ಅವನಿಗೆ ಅವಕಾಶ ಕೊಡಬೇಕಿತ್ತಲ್ಲ?

ಅವನು ಹೊಗಳಿಕೆಯ 'ಪ್ರಹಾರ'ಕ್ಕಿಳಿದಿದ್ದ. ನಾನು ರಕ್ಷಣೆಯ 'ಮೌನತಂತ್ರ'ವನ್ನು ಮುಂದುವರೆಸಿದೆ. ಅವನನ್ನು ನನ್ನ ವಿಚಾರದ ಬಗ್ಗೆ ಅಳೆಯಬೇಕಾದ ಸಂದರ್ಭ ಅದಾಗಿತ್ತು. ಅವನ ಪ್ರಹಾರಕ್ಕೆ ಪೂರ್ತಿ ತೆರೆದುಕೊಂಡೆ. ಆದರೆ ಅವನ ಹೊಗಳಿಕೆಯ ಕಾರಣ ನನ್ನ ಮುಖದಲ್ಲಿ ಸ್ನಾಯುಗಳು ಹಿಗ್ಗಿರಲಿಲ್ಲ. ಕಣ್ಣುಗಳು ಮಿನುಗಿರಲಿಲ್ಲ. ಹೆಮ್ಮೆ ಬೆಳಗಿರಲಿಲ್ಲ. ಅಸಲು, ದೈಹಿಕ ಭಾಷೆಯಲ್ಲೂ ಅಷ್ಟೊಂದು ನಾಟಕ ಆಡಲು ನನಗೆ ಬರುತ್ತಿರಲಿಲ್ಲ.

ಅದನ್ನು ಅವನಾಗಲೇ ಗಮನಿಸಿದ್ದ. ಕ್ಷಣ ಕಾಲ ಅವನ ಸರಿಸಮಕ್ಕೆ ತೂಗಲಾಗದ ನನ್ನ ಮಾತುಗಾರಿಕೆಯ ತಂತ್ರಗಳ ಬಗ್ಗೆ ಅವನಿಗೆ ಮೋಜೆನಿಸಿರಬಹುದು ಎಂದುಕೊಂಡೆ.

ನನ್ನ ಸ್ಥಾನದಲ್ಲಿದ್ದಿದ್ದರೆ ಅವನು ನನ್ನನ್ನೂ ಮೀರಿಸಿ ಯಾಮಾರಿಸಬಲ್ಲವನಾಗಿದ್ದ ಎನ್ನುವುದರಲ್ಲಿ ನನಗೆ ಅನುಮಾನವಿರಲಿಲ್ಲ. ಎಷ್ಟಾದರೂ ನಾನು ಜೂನಿಯರ್ ತಾನೇ? ಆದರೂ ಅವನನ್ನು ಮಾತಿನಲ್ಲಿ ಮೀರಿಸಲಾಗದ ನನ್ನ ಅಹಂ ಕೆಲ ಕಾಲ ತುಳಿಸಿಕೊಂಡ ಹಾವಿನಂತೆ ಮೌನವಾಗಿ ಬುಸುಗುಟ್ಟಿತು.

ತನ್ನ ಅಗತ್ಯಕ್ಕೆ ತಕ್ಕಂತೆ ನಮ್ಮನ್ನು ದಾಳಗಳನ್ನಾಗಿ ದುಡಿಸಿಕೊಳ್ಳುವುದು ತನ್ನ ಹಕ್ಕು ಅಥವಾ ಜಾಣ್ಮೆ ಎನ್ನುವ ಅವನ ನಂಬಿಕೆಗೆ ಸೆಡ್ಡು ಹೊಡೆಯಬೇಕೆನ್ನುವ ಸುಪ್ತ ಬಯಕೆ ನನ್ನ ಆಳದಲ್ಲೆಲ್ಲೋ ಹುದುಗಿತ್ತು ಅನ್ನಿಸುತ್ತದೆ. ಆದರೆ ಯಾಕೆ ಎಂದು ನನಗೆ ತಿಳಿದಿರಲಿಲ್ಲ. ಅದಕ್ಕೆ ಇದೀಗ ಅವಕಾಶ ಹುಡುಕಿಕೊಂಡು ಬಂದಿತ್ತು.

''ಕತ್ತೆಗಳು ಕತ್ತೆ ಕೆಲಸ ಮಾಡಲಿ, ನೀನು ನಿನ್ನ ದುಡಿತವನ್ನು ಹೀಗೇ ಮುಂದುವರೆಸು. ನಿನಗೆ ಏನಾದರೂ ಬೇಕಾದರೆ ತಿಳಿಸು. ಈ ವರ್ಷದ ನಮ್ಮ ಸಂಸ್ಥೆಯ ವಾರ್ಷಿಕೋತ್ಸವದಲ್ಲಿ ಈ ಆಸ್ಪತ್ರೆಯ ವರ್ಷದ ವೈದ್ಯ ಉದ್ಯೋಗಿ ಪ್ರಶಸ್ತಿ ನಿನಗೇ ಸಿಗಬಹುದು.'' ದೊಡ್ಡ ಗುಟ್ಟಿನೊಂದಿಗೆ ನನಗೊಬ್ಬನಿಗೆ ಮಾತ್ರ ಹೇಳುವ ಆತ್ಮೀಯತೆಯ ಭಾವನೆಗಳನ್ನು ಬೆಸೆಯತೊಡಗಿದ.

ನನ್ನ ಸಹೋದ್ಯೋಗಿಗಳನ್ನು ಕತ್ತೆಗಳಿಗೆ ಹೋಲಿಸಿ ಹೀಗಳಿಕೆಯ ಧ್ವನಿಯಲ್ಲಿ ಅವನು ಮಾತಾಡಿದ್ದು ನನಗೆ ಹಿತವೆನಿಸದೆ ಬೇಸರಕ್ಕೆ ಕಾರಣವಾಯಿತು. ನನಗಿಂತ ಹೆಚ್ಚು ದುಡಿವವರ ಮುಂದೆ ನನ್ನನ್ನೂ ಇದೇ ರೀತಿ ಅವನು ಬಲಿಹಾಕುತ್ತಾನಲ್ಲವೇ? ನನ್ನ ಸಹೋದ್ಯೋಗಿಗಳು ನನಗಿಂತ ಹತ್ತು ವರ್ಷಕ್ಕೂ ಹೆಚ್ಚು ಕಾಲದಿಂದ ಅವನ ಸಂಸ್ಥೆಯಲ್ಲಿ ದುಡಿಯುತ್ತಿದ್ದರು. ಅವರು ಅವನ ಹೋಲಿಕೆಯನ್ನು ಕೇಳಿದರೆ ಏನೆಂದುಕೊಳ್ಳಬೇಕು? ಅವರಿಗಿಂತ ಒಂದಷ್ಟು ಹೆಚ್ಚು ದುಡಿದ ಕೂಡಲೆ ಕತ್ತೆಯ ಮುಂದೆ ಕ್ಯಾರೆಟ್ ಕಟ್ಟಿದಂತೆ ಪ್ರಶಸ್ತಿಯ ಆಮಿಷ ಒಡ್ಡಿ ನನ್ನನ್ನು ಇನ್ನೊಂದು ಕತ್ತೆಯನ್ನಾಗಿ ಮತ್ತೂ ದುಡಿಸಲು ಉತ್ತೇಜಿಸುತ್ತಿದ್ದ ಅವನ ಬಗ್ಗೆ ಕುತೂಹಲವಾಯಿತು.